ಗಮನಕ್ಕೆ ಬಂದಿದೆ. ಆದ್ದರಿಂದ ಅವರಿಗೆ ಮತ್ತು ಅವರ ಸಂಸಾರದವರಿಗೆ ಪೋಲೀಸ್ ಬಂದೋಬಸ್ತನ್ನು ಕೊಡಬೇಕು. ಏಕೆಂದರೆ, ಇವರನ್ನು ಕೆಣಕಿರುವವರು ಸಣ್ಣವರೇನೂ ಅಲ್ಲ. ಅವರು ಬಹಳ ಬಲವುಳ್ಳವರು, ಪ್ರಭಾವಿಗಳು, ಆದ್ದರಿಂದ ಇವರಿಗೆ ರಕ್ಷಣೆ ಕೊಡಬೇಕು.

ಅಧ್ಯಕ್ಷರು.— ತಮ್ಮ ನೋಟೀಸು ಬಂದಿದೆ ಅದನ್ನು ಹೋಂ ಡಿಪಾರ್ಟ್‌ಮೆಂಟ್‌ಗೆ ಕಳುಹಿಸಿ ಕೊಡುತ್ತೇವೆ.

ಶ್ರೀ ಟಿ. ಚೌಡಯ್ಯ.—ದಲಿತ ವಿದ್ಯಾರ್ಥಿಗಳದ್ದೇ ಒಂದು ಗುಂಪು, ಮಿಕ್ಕ ವಿದ್ಯಾರ್ಥಿಗಳದ್ದೇ ಒಂದು ಗುಂಪಾಗಿದೆ. ಈಗ ಈ ಪ್ರಾಚಾರ್ಯರ ಪ್ರಾಣಕ್ಕೆ ಅಪಾಯ ಬಂದಿರುವುದರಿಂದ ಕಬಾಡೆಯವರಿಗೂ ಮತ್ತು ಇವರ ಮನೆಯವರಿಗೂ ಪ್ರೊಟೆಕ್ಷನ್ ಕೊಡುವುದಲ್ಲದೆ, ವಿದ್ಯಾರ್ಥಿಗಳ ಮಧ್ಯದಲ್ಲೇ ಗುಂಪು ಬೆಳೆದಿರುವುದರಿಂದ ಇಲ್ಲೂ ಕೂಡ ಪೋಲೀಸ್ ಬಂದೋಬಸ್ತ್ ಕೊಡಬೇಕೆಂದು ಪತ್ರ ಬರೆದಿದ್ದರೂ ತಾವು ಇದುವರೆಗೂ ಕ್ರಮ ತೆಗೆದುಕೊಂಡಿಲ್ಲ.

ಮಾನ್ಯ ಅಧ್ಯಕ್ಷರೆ, ಇನ್ನೊಂದು ಮುಖ್ಯ ವಿಚಾರ ಹೇಳಬೇಕೆಂದರೆ ಪೋಲಿಸ್ ಸೂಪರಿಂಟೆಂಡೆಂಟ್ ರವರ ಹತ್ತಿರ ಕಂಪ್ಲೈಂಟ್ ಕೊಡುವುದಕ್ಕೆ ಹೋದಾಗ ನಿಮಗೆ ವಿದ್ಯಾರ್ಥಿಗಳ ರಕ್ಷಣೆ ಇರುವುದರಿಂದ ನಿಮಗೆ ಏತಕ್ಕೆ ರಕ್ಷಣೆ ಕೊಡಬೇಕೆಂದು ಇವರನ್ನೇ ಗದರಿಸಿ ಕಳುಹಿಸಿದ್ದಾರೆ. ಆದ್ದರಿಂದ ನಾನಾದರೂ ತನ್ನ ಮುಖಾಂತರ ಕೇಳಿಕೊಳ್ಳುವುದು ಮತ್ತೆ ಇಂಥ ದುರ್ಘಟನೆ ನಡೆಯುವುದಕ್ಕೆ ಮುಂಚಿತವಾಗಿ ತಾವು ರಕ್ಷಣೆ ಕೊಡಬೇಕು.

ಅಧ್ಯಕ್ಷರು.—ನಿಮ್ಮ ನೋಟಿಸನ್ನು ಹೋಂ ಕಮೀಷನರ್ ಆಫೀಸಿಗೆ ಕಳುಹಿಸಿದ್ದೇವೆ. ಆತಿಶೀಘ್ರವಾಗಿ ಇದನ್ನು ಪ್ರಸಾಪಮಾಡುವ ವ್ಯವಸ್ಥೆ ಮಾಡುತ್ತೇವೆ.

CALLING ATTENTION TO MATTERS OF URGENT PUBLIC IMPORTANCE

(i) *re: Drinking water supply scheme to Gadag-Betgeri City*

SRI C. S. MUTINAPENDIMATH.—Sir. I call the attention of the Minister for Housing & Urban Development to the drinking water supply scheme to Gadag-Betgeri city.

SHRI DHARAM SINGH NARAYANA SINGH (Minister for Housing and Urban Dev.).—Sir, I beg to make the following.—

The Scheme for providing Water Supply to Gadag-Betgeri City with Thungabhadra River as source, has been Administratively approved for the revised estimate of Rs. 708.00 lakhs on 4-10-1979. The financing of the scheme has been indicated as obtaining loan assistance of Rs 278.00 lakhs from the Life Insurance Corporation of India and the remaining Rs. 430.00 lakhs as loan from the State Government. The scheme has also been sanctioned on 23-8-1980 technically for the same amount. The L.I.C. was approached for grant of loan of Rs. 100.00 lakhs during 1980-81. But the L. I. C. of India authorities have informed us that the scheme is very costly and water rate working out to Rs. 12.73 per thousand gallon for domestic supply is too exhorbitant to be levied on the consumers and as such they have suggested taking up the entire scheme with full

financial assistance as grant-in-aid to the Municipality. The L.I.C. is being prevailed upon to agree and finance the scheme.

To meet the immediate demands of water supply during summer, the proposal to sink 20 Borewells has been got up for Rs. 19.70 lakhs under Scarcity Relief Programme. Funds necessary for the purpose are being released for sinking these borewells to augment the supply, to allieviate the present scarcity situation. Work on this has already been taken up. Rs. 78.00 lakhs provided for this work has been fully utilised and the following works are partly executed.

1. Intake chamber and Jackwell at Karlahalli on Bank of Tungabhadra River
2. Ground Service Reservoir and Quarters at Advisomapur.
3. Quarters and Office building at Gadag (completed).
4. Distribution system in the cities (completed). This is being used for supplying Borewell water to the City.

Further steps are being taken to augment the resources to meet the expenditure on the water supply scheme and complete the scheme as early as possible.

† ಶ್ರೀ ಸಿ. ಎಸ್. ಮುತ್ತಿನಪೆಂಡಿಮಠ್ (ಗದಗ್).—ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಯವರಿ ಮಾಡಿರತಕ್ಕ ಹೇಳಿಕೆ ನಿಜವಾಗಿಯೂ ವಿಷಾದಕರವಾದ ಸಂಗತಿಯಾಗಿದೆ ಎಂದರೆ ತಪ್ಪಾಗಲಾರದು. ಗದಗ್ ಬೆಟ್ಟಿಗೇರಿಯ ನೀರಿನ ಸಮಸ್ಯೆ ಕಳೆದ ೩೦ ವರ್ಷಗಳಿಂದ ಇದ್ದೇ ಇದೆ ಮಲಪ್ರಭಾ ಸ್ಕೀಂನಾಗಿ ಸುಮಾರು ೮೦ ಲಕ್ಷದಷ್ಟು ಮುನಿಸಿಪಾಲಿಟಿ ಹಣ ಹಾಳಾಗಿ ಹೋಗಿದೆ. ಈಗಿನ ಮುನಿಸಿಪಾಲಿಟಿಗಳ ಆರ್ಥಿಕ ಪರಿಸ್ಥಿತಿಯಂತೂ ತೀರಾ ಹದಗೆಟ್ಟಿದೆ. ಅವರು ತಮ್ಮ ಸಿಬ್ಬಂದಿವರ್ಗಕ್ಕೆ ಸಂಬಳ ಕೊಡುವುದಕ್ಕೂ ಕೂಡ ಆಗುತ್ತಿಲ್ಲ. ಇಂಥ ಪರಿಸ್ಥಿತಿ ಇರುವುದರಿಂದ ಗ್ರಾಂಟ್ ಕೊಟ್ಟು ಇದನ್ನು ಪೂರೈಸಿಕೊಡಿಂತ್ತೇವೆಂದು ಹೇಳಿದಿರಿ. ಆದರೆ ಇದುವರೆಗೂ ಗ್ರಾಂಟ್ ಕೊಟ್ಟಿಲ್ಲ. ಇಷ್ಟೇ ಅಲ್ಲದೆ ಗದಗ್ ಬೆಟ್ಟಿಗೇರಿ ಜನಸಂಖ್ಯೆ ೧ಲಕ್ಷ ೩೦ ಸಾವಿರಕ್ಕೂ ಹೆಚ್ಚಾಗಿದೆ. ನಮ್ಮ ಕರ್ನಾಟಕ ಪ್ರಾಂತ್ಯದಲ್ಲಿ ನೀರೇ ಇಲ್ಲದಿರತಕ್ಕಂಥ ಒಂದೇ ಒಂದು ಪಟ್ಟಣ ಎಂದರೆ ನಮ್ಮ ಈ ಗದಗ್ ಬೆಟ್ಟಿಗೇರಿ ನಗರ ? ಈ ವರ್ಷ ಅಲ್ಲಿ ಸಾಕಷ್ಟು ಮಳೆ ಇಲ್ಲ. ಕುಡಿಯುವ ನೀರಿನ ಪರಿಸ್ಥಿತಿ ಬಹಳಷ್ಟು ಹದಗೆಟ್ಟಿದೆ. ಮುಂಜಾನೆಯಿಂದ ಸಂಜೆವರೆಗೂ ಜನರು ಕೊಡಗಳನ್ನು ತಲೆಯಮೇಲೆ ಹೊತ್ತುಕೊಂಡು ನೀರಿಗಾಗಿ ಓಡಾಡುತ್ತಿದ್ದಾರೆ.....

ಶ್ರೀ ಜೆ. ಹೆಚ್. ಪಟೇಲ್.—ಅಲ್ಲಿ ಕುಡಿಯುವ ನೀರಿಗಿಂತ ಹೆಚ್ಚಾಗಿ ಕಣ್ಣೀರು ಇದೆ ಎಂದು ನಾನು ಕೇಳಿದ್ದೇನೆ.

ಶ್ರೀ ಸಿ. ಎಸ್. ಮುತ್ತಿನಪೆಂಡಿಮಠ್.—ತಾವು ಹೇಳಿದಂತೆ ಅಲ್ಲಿ ಕುಡಿಯುವ ನೀರಿಗಿಂತ ಕಣ್ಣೀರೇ ಹೆಚ್ಚಾಗಿದೆ. ಮಾನ್ಯ ಅಧ್ಯಕ್ಷರೆ, ಅಲ್ಲಿನ ಪರಿಸ್ಥಿತಿ ಈ ರೀತಿ ಇರುವುದರಿಂದ ಕೂಡಲೇ ತೀವ್ರಗತಿಯಿಂದ ತುಂಗಭದ್ರಾ ಸ್ಕೀಂನ್ನು ತೆಗೆದುಕೊಂಡು ಇದಕ್ಕಾಗಿ ಸರ್ಕಾರ ಹೆಚ್ಚಿನ ಹಣವನ್ನೊದಗಿಸಿ ಈ ಯೋಜನೆಯನ್ನು ಪೂರೈಸಿಕೊಡುವುದಾಗಿ ಭರವಸೆ ಕೊಡಬೇಕು. ಕಳೆದಸಾರಿ ಮಾನ್ಯ ಮುಖ್ಯ ಮಂತ್ರಿಯವರು ಅಲ್ಲಿಗೆ ಬಂದಿದ್ದಾಗ ಇನ್ನು ೭-೮ ದಿವಸಗಳಲ್ಲಿ ಈ ನೀರಿನ ಸಮಸ್ಯೆಯನ್ನು ಬಗೆಹರಿಸಲು ಹಣವನ್ನೊದಗಿಸಿ ಕೊಡುತ್ತೇನೆಂದು ಭರವಸೆಯನ್ನು ಕೊಟ್ಟು ಬಂದಿದ್ದರು. ಈ ರೀತಿ ಭರವಸೆ ಕೊಟ್ಟುಬಂದು ಈಗಾಗಲೇ ೪ ತಿಂಗಳಾಯಿತು. ಆದರೆ ಇದುವರೆಗೂ ಹಣವನ್ನು ಒದಗಿಸಿಲ್ಲ. ಮಾನ್ಯ ಹಣಕಾಸಿನ ಸಚಿವರು ಇದರ ಬಗ್ಗೆ ಯಾವ ಕ್ರಮವನ್ನೂ ತೆಗೆದುಕೊಂಡಿಲ್ಲ. ಇದೇ ವಿಷಯವನ್ನು ಕಳೆದಸಾರಿಯ ಅಧಿವೇಶನದಲ್ಲಿ ಇದೇ ಸದನದಲ್ಲಿ ಎತ್ತಿದ್ದೆ. ಆಗ ಮಾನ್ಯ ಶ್ರೀಕಂಠಯ್ಯನವರು ಇಂಥದ್ದೇ ಹೇಳಿಕೆಯನ್ನು ಕೊಟ್ಟಿದ್ದರು.

ಆದರೆ ಇದುವರೆಗೂ ಸರ್ಕಾರದವರು ಹಣವನ್ನು ಕೊಡದೇ ಇರುವುದನ್ನು ನೋಡಿದರೆ ಗದಗ್ ಬೆಟಗೇರಿ ಯಲ್ಲಿ ಕುಡಿಯುವ ನೀರಿನ ಯೋಜನೆ ಆಗುತ್ತದೋ ಇಲ್ಲವೋ ಎಂಬ ಅನುಮಾನ ಬಂದಿದೆ. ಮಾನ್ಯ ಪೌರಾಡಳಿತ ಸಚಿವರು ಈ ಪರಿಸ್ಥಿತಿಯನ್ನು ಮನಗಂಡು ಈ ದಿವಸವೇ, ಈ ಸದನದಲ್ಲಿಯೇ ಈ ಬಾಬಿ ಗಾಗಿ ೧–೨ ಕೋಟಿ ರೂ. ಗಳನ್ನಾದರೂ ಒದಗಿಸಿಕೊಡುವ ಭರವಸೆಯನ್ನು ಕೊಡುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ. ಇಷ್ಟೇ ಅಲ್ಲದೆ ಗದಗ್ ಬೆಟಗೇರಿ ಜನರೂ ಕೂಡ ಸರದಿ ಉಪವಾಸ ಕುಳಿತಿದ್ದಾರೆ. ಈ ಯೋಜನೆಯ ಅಭಿವೃದ್ಧಿಗೋಸ್ಕರವಾಗಿ ವಕೀಲರು ಇನ್ನೂ ಇತರೇ ಸಂಘಸಂಸ್ಥೆಗಳವರು ಕೂಡ ಸರದಿ ಉಪವಾಸವನ್ನು ಕುಳಿತಿದ್ದಾರೆ. ಇಂಥ ಒಂದು ಪರಿಸ್ಥಿತಿ ಇರುವಾಗ್ಗೆ ಅಲ್ಲಿಗೆ ಶಾಸಕರು ಹೋಗ ತಕ್ಕಂಥ ಪರಿಸ್ಥಿತಿ ಇರುತ್ತದೆ. ಅಲ್ಲಿಗೆ ಹೋಗುವುದಿರಲಿ ಶಾಸಕರ ಮನೆಗೆ ಜನರು ಬರುತ್ತಿರುತ್ತಾರೆ. ಸದನದಲ್ಲಿ ಸರಿಯಾದ ರೀತಿಯಲ್ಲಿ ಮಾತನಾಡಿ ನೀರು ಪೂರೈಕೆಯ ವ್ಯವಸ್ಥೆಯನ್ನು ಮಾಡದಿದ್ದರೆ ರಾಜೀನಾಮೆಯನ್ನು ಕೊಟ್ಟು ಮನೆಗೆ ಬನ್ನಿ ಎಂದು ಕೇಳುತ್ತಿದ್ದಾರೆ. ಈ ಪರಿಸ್ಥಿತಿ ಅಲ್ಲಿ ಉಂಟಾಗಿರುವ ಕಾರಣ ಮಾನ್ಯ ಮುಖ್ಯಮಂತ್ರಿಗಳೂ ಅಲ್ಲಿಗೆ ಬಂದಾಗ್ಗೆ ವಿಷಯದ ಬಗ್ಗೆ ಹೇಳಿದಾಗ ನೀರು ಪೂರೈಕೆ ಯೋಜನೆಯನ್ನು ಆದಷ್ಟು ತೀವ್ರವಾಗಿ ಮಾಡಿಕೊಡುತ್ತೇವೆಂದು ಹೇಳಿ ಬಂದಿರುತ್ತಾರೆ. ಮುಂಡೆ ಗದಗ್ ಬೆಟಗೇರಿಗೆ ಹೆಚ್ಚಿನ ಬೋರ್‌ವೆಲ್‌ಗಳನ್ನು ಹಾಕುವ ಯೋಜನೆಯನ್ನು ಹಾಕಿಕೊಂಡಿದ್ದರೂ ಕೂಡ ಅದು ಯಶಸ್ವಿಯಾಗಲಾರದು. ಏತಕ್ಕೆಂದರೆ ಜಿಯಲಾಜಿಕಲ್ ಡಿಪಾರ್ಟ್‌ಮೆಂಟ್‌ನವರು ಇಲ್ಲಿ ಮತ್ತಷ್ಟು ಬೋರ್‌ವೆಲ್‌ಗಳನ್ನು ಹಾಕಿದುವುದರಿಂದ ಯಾವ ಉಪಯೋಗವು ಆಗುವುದಿಲ್ಲವೆಂದು ಹೇಳಿರುತ್ತಾರೆ. ಆದ್ದರಿಂದ ಈ ವಿಚಾರದಲ್ಲಿಯೂ ಕೂಡ ಮಾನ್ಯ ಮುಖ್ಯಮಂತ್ರಿಗಳು ವಿಚಾರ ಮಾಡಿ ಮಾನ್ವಿಯಲ್ಲಿರುವ ಬೀಚ್ಚಿಕೆರೆಯನ್ನು ಮತ್ತಷ್ಟು ಆಳಮಾಡಿ ಅಲ್ಲಿ ನೀರನ್ನು ಸಂಗ್ರಹಿಸುವುದಾದರೆ ಎರಡು ಮೂರು ವರ್ಷ ಗಳಿಗಾಗುವಷ್ಟು ನೀರನ್ನು ಸಂಗ್ರಹಿಸಲು ಸಾಧ್ಯವಿರುತ್ತದೆ. ಆದ್ದರಿಂದ ಈ ಯೋಜನೆಗೆ ಸಾಕಷ್ಟು ಹಣವನ್ನು ಒದಗಿಸಿ ಗದಗ್‌ಗೆ ನೀರನ್ನು ಒದಗಿಸತಕ್ಕಂಥ ಪ್ರಯತ್ನವನ್ನು ಮಾಡಬೇಕೆಂದು ಮಾನ್ಯ ಸಚಿವರಲ್ಲಿ ವಿನಂತಿಸಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಮುತ್ತಿಕಟ್ಟಿ (ರೋಣ).—ಮಾನ್ಯ ಅಧ್ಯಕ್ಷರೇ ಗದಗ್ ಬೆಟಗೇರಿ ಒಂದು ಲಕ್ಷ ಜನಸಂಖ್ಯೆ ಇರತಕ್ಕಂಥ ನಗರವಾಗಿದ್ದು ಕುಡಿಯುವುದಕ್ಕೂ ನೀರು ಸಿಕ್ಕಂದಥ ಒಂದು ನಗರವಾಗಿದೆ ಎಂದು ಬಹಳ ವಿಷಾದದಿಂದ ಹೇಳಲು ಇಷ್ಟಪಡುತ್ತೇನೆ. ಕರ್ನಾಟಕ ಸರ್ಕಾರದವರು ೪/೧೦/೧೯೭೦ ರಂದು ಏಳು ಕೋಟಿ ಎಂಟುಲಕ್ಷ ರೂಪಾಯಿಗಳ ಯೋಜನೆಯನ್ನು ಮಂಜೂರಾತಿ ಮಾಡಿದನಂತರ ಇದುವರೆಗೆ ಕೊಟ್ಟಂಥ ಹಣ ಕೇವಲ ೭೮ ಲಕ್ಷ ರೂಪಾಯಿಗಳು ಮಾತ್ರ ವಾಗಿರುತ್ತದೆ. ಗದಗ್ ನಗರ, ರೋಣ, ನರಗುಂದ್, ನವಲಗುಂದ್ ಮುಂಡರಗಿ ಮತ್ತಿತರ ಸುತ್ತಮುತ್ತಲ ಸ್ಥಳಗಳಿಂದ ವ್ಯಾಪಾರ ಕ್ಕಾಗಿ ಮತ್ತು ಶಿಕ್ಷಣಕ್ಕಾಗಿ ಬರತಕ್ಕಂಥ ಒಂದು ಕೇಂದ್ರವಾಗಿರತಕ್ಕಂಥ ಈ ಗದಗ್ ನಗರದಲ್ಲಿ ಕುಡಿಯಲು ನೀರಿನ ಸರಬರಾಜು ಸಮರ್ಪಕವಾಗಿಲ್ಲದ ಕಾರಣ ಅಲ್ಲಿಯ ವಕೀಲರು ಉಪವಾಸ ಕುಳಿತುಕೊಳ್ಳುವ ಪರಿಸ್ಥಿತಿಗೆ ಬಂದಿರುತ್ತದೆ. ಜೊತೆಗೆ ಬೇರೆ ಸಂಘ ಸಂಸ್ಥೆಗಳು ಉಪವಾಸ ಸತ್ಯಾಗ್ರಹ ಕುಳಿತುಕೊಳ್ಳುವ ಪರಿಸ್ಥಿತಿ ಬಂದಿರುತ್ತದೆ. ಈವತ್ತಿಗೂ ಕೂಡ ನೀರಿಗಾಗಿ ಸುತ್ತಮುತ್ತಲ ಹಳ್ಳಿಯವರು ಒಂದು ಕೊಡ ನೀರನ್ನು ಮೂರು ಸಾಲ್ಕು ಮೈಲಿ ದೂರದಿಂದ ತರತಕ್ಕಂಥ ಪರಿಸ್ಥಿತಿ ನಿರ್ಮಾಣವಾಗಿರುತ್ತದೆ. ಇಷ್ಟಾದರೂ ಸಹ ಸರ್ಕಾರದವರು ಯಾವ ವಿಧವಾದ ಕಾರ್ಯಕ್ರಮವನ್ನು ತೆಗೆದುಕೊಳ್ಳದಿರುವುದಕ್ಕಾಗಿ ನಾನು ಬಹಳ ವಿಷಾದವನ್ನು ವ್ಯಕ್ತಪಡಿಸಬೇಕಾಗಿರುತ್ತದೆ. ಈವತ್ತು ವಿಷಾದಿದೆ ಎಂದರೆ ಎಲ್.ಐ.ಸಿ.ಯವರಿಂದ ಹೆಚ್ಚು ಹಣ ಬರುತ್ತದೆಂಬ ಪಾಸಿಬ ಲಿಟೀಸ್ ಇಲ್ಲವೆಂಬ ಮಾತನ್ನು ಇಲಾಖೆಯವರು ಹೇಳುತ್ತಿದ್ದಾರೆ. ಮಳೆಯೇ ಇಲ್ಲದಂಥ ಈ ಪ್ರದೇಶದಲ್ಲಿ ಯಾವುದೇ ಕಾರಣಗಳಿಂದ ಈ ಯೋಜನೆಯನ್ನು ಕಾರ್ಯಗತ ಗೊಳಿಸದೆ ಕೈ ಬಿಡತಕ್ಕಂಥದ್ದು ಸರಿಯಲ್ಲ. ನೀರನ್ನು ಒದಗಿಸತಕ್ಕಂಥದ್ದು ಒಂದು ವಿಶೇಷವಾಗಿರತಕ್ಕಂಥ ಮೂಲಭೂತವಾದ ವಿಷಯವಾಗಿರುತ್ತದೆ. ಇಂಥ ಒಂದು ಕೆಲಸವನ್ನು ಸರ್ಕಾರದವರು ತೀವ್ರವಾಗಿ ಪರಿಶೀಲನೆಮಾಡಿ ಕ್ರಮ ತೆಗೆದುಕೊಳ್ಳಬೇಕಾಗಿತ್ತು ಎಲ್.ಐ.ಸಿ.ಯವರಿಗೆ ಸರ್ಕಾರದವರು ಗ್ಯಾರೆಂಟಿ ಕೊಟ್ಟರೆ ಎರಡು ಕೋಟಿ ರೂಪಾಯಿಗಳನ್ನು ಕೊಡತಕ್ಕಂಥ ವಿಷಯವನ್ನು ತಿಳಿಸಿದ್ದಾರೆ. ಅದಕ್ಕಾಗಿ ಸರ್ಕಾರದವರು ಗ್ಯಾರಂಟಿ ಕೊಡುವುದರ ಜೊತೆಗೆ ನೇರವಾಗಿ ಅವರಿಗೆ ಗ್ಯಾರಂಟ್‌ಇನ್‌ಪಿಡ್ ಮುಟ್ಟುಂತರ ವಾಗಿ ಹೆಚ್ಚು ಹಣವನ್ನು ಕೊಡಬೇಕೆಂದು ಈ ಮೂಲಕ ಹೇಳಬಯಸುತ್ತೇನೆ. ಸರ್ಕಾರದವರು ೨೦ ಬೋರ್‌ವೆಲ್‌ಗಳಿಗಾಗಿ ೧೯.೭೦ ಸಾವಿರ ರೂಪಾಯಿಗಳನ್ನು ಮಂಜೂರು ಮಾಡಿದ್ದೇವೆಂದು ಹೇಳಿದ್ದಾರೆ. ಇದ ವ್ಯರ್ಥವಾಗಿ ಹೋಗತಕ್ಕಂಥ ಹಣವಾಗಿರುತ್ತದೆ. ಏತಕ್ಕೆಂದರೆ ಈಗಾಗಲೇ ೨೫–೩೦ ಬೋರ್‌ವೆಲ

ಗಳನ್ನು ತೆಗೆಸಿದ್ದು ಅವುಗಳು ಕೆಲಸವನ್ನು ಮಾಡುತ್ತಿದ್ದರೂ ಸಹ ಸಮರ್ಪಕವಾಗಿ ನೀರು ದೊರೆಯುತ್ತಿಲ್ಲ ನೀರೆಲ್ಲ ಕೆಳಗೆ ಹೋಗಿ ಭೂಮಿಯಲ್ಲಿ ನೀರೆ ಸಿಕ್ಕದಂಥ ಪರಿಸ್ಥಿತಿ ಇರುವಾಗ ಮತ್ತೆ ಬೋರ್‌ವೆಲ್‌ಗಳನ್ನು ತೆಗೆಸುವುದರಿಂದ ಯಾವ ಪ್ರಯೋಜನವು ಆಗುವುದಿಲ್ಲ. ಬೋರ್‌ವೆಲ್‌ಗಳನ್ನು ಹಾಕುವುದಕ್ಕೆ ಅಲ್ಲಿ ಸ್ಥಳವೇ ಇರುವುದಿಲ್ಲ. ಈಗಿರತಕ್ಕಂಥ ಬೋರ್‌ವೆಲ್‌ಗಳು ಕೆಲಸಮಾಡದೆ ಇದ್ದರೂ ಸಹ ತಪ್ಪು ಮಾಹಿತಿಯನ್ನು ಕೊಟ್ಟಿರತಕ್ಕಂಥ ಅಧಿಕಾರಿಗಳ ಬಗ್ಗೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಹೇಳುತ್ತಾ ಈಗಿರತ್ಕಂಥ ಬೋರ್‌ವೆಲ್‌ಗಳ ಜೊತೆಗೆ ಮತ್ತೆ ಬೋರ್‌ವೆಲ್‌ಗಳನ್ನು ತೆಗೆಯಲು ಹಣವನ್ನು ಸಾಲ ಮಾಡಿದರೆ ಅದು ವ್ಯರ್ಥವಾಗುತ್ತದೆ. ಅದರ ಬದಲಾಗಿ ಭೀಷ್ಮಾ ಕೆರೆಗೆ ನೀರು ಬರುವಂಥ ವ್ಯವಸ್ಥೆಯನ್ನು ಮಾಡಿದರೆ ಬಹಳ ಉತ್ತಮವಾಗುತ್ತದೆಂದು ಹೇಳುತ್ತೇನೆ. ರಾಜಕೀಯದಿಂದಾಗಿ ಈ ಒಂದು ಪ್ರದೇಶವನ್ನು ನಿರ್ಲಕ್ಷಿಸಿಕೊಂಡು ಬಂದಿರುತ್ತಾರೆ. ಅಂಥ ಒಂದು ನಿರ್ಲಕ್ಷಭಾವನೆಯನ್ನು ಬಿಟ್ಟು ನೇರವಾಗಿ ಕೆಲವೊಂದು ಅಭಿವೃದ್ಧಿ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕಾಗಿರುತ್ತದೆ. ೨೦ ವರ್ಷಗಳಿಂದಲೂ ಗದಗ್ ಮುನಿಸಿಪಾಲಿಟಿಯವರಿಗೆ ತಿಳಿಸುತ್ತಲೇ ಬಂದಿರುತ್ತೇವೆ. ಮಾನ್ಸಿ ಭೀಷ್ಮಾ ಕರೆಯಲ್ಲಿ ನೀರನ್ನು ಸಂಗ್ರಹ ಮಾಡತಕ್ಕಂಥ ಕ್ರಮವನ್ನು ಕೈಗೊಳ್ಳಬೇಕೆಂದು. ಆದರೂ ಅವರು ಅದನ್ನು ನಿವೇಶನಗಳಿಗಾಗಿ ಕೊಡತಕ್ಕಂಥ ವ್ಯವಸ್ಥೆಯನ್ನು ಮಾಡಿ ಅದು ಅನುಕೂಲವಾಗಿ ಬಂದರೂ ಕೂಡ ಹೆಚ್ಚಿನ ಭಾಗದಲ್ಲಿ ಮಳೆಯ ನೀರು ನಿಲ್ಲುವಂತೆ ಮಾಡಬೇಕೆಂದು ಹೇಳುತ್ತೇನೆ. ಇದಕ್ಕೆ ಕನಿಷ್ಟಪಕ್ಷ ಒಂದೂವರೆ ಎರಡು ಕೋಟಿ ರೂಪಾಯಿಗಳನ್ನು ತೆಗೆದುಕೊಂಡರೂ ಕೂಡ ಸರ್ಕಾರದವರು ಈ ಯೋಜನೆಯನ್ನು ಕೈಗೊಳ್ಳಬೇಕೆಂದು ಹೇಳಲು ಇಷ್ಟಪಡುತ್ತೇನೆ. ತುಂಗಭದ್ರಾ ನೀರು ಗದಗ್‌ಗೆ ಬರುವಂಥ ವ್ಯವಸ್ಥೆಯನ್ನು ಮಾಡಬೇಕು. ಮಂಡರಗಿ ತಾಲ್ಲೂಕಿನ ಸುತ್ತ ಮುತ್ತಲ ಹಳ್ಳಿಗಳಲ್ಲಿ ಕುಡಿಯಲಿಕ್ಕೂ ನೀರು ಇಲ್ಲದೆ ಜನರು ಪರಿತಪಿಸುತ್ತಿದ್ದಾರೆ. ರೂರಲ್ ಏನ್.ಆರ್.ಡಬ್ಲೂ ಸ್ಕೀಮ್ ನಿಂದ ಹಣವನ್ನು ತೆಗೆದುಕೊಂಡು ಇದಕ್ಕೆ ಉಪಯೋಗಿಸಿಕೊಂಡರೆ ಬಹಳ ಅನುಕೂಲವಾಗುತ್ತದೆ. ಈಪತ್ತಿನ ದಿವಸ ವಕೀಲರು ಎಲ್ಲ ಸಂಘಸಂಸ್ಥೆಗಳವರು ಸರದಿ ಉಪವಾಸ ಸತ್ಯಾಗ್ರಹವನ್ನು ಕುಳಿತಿರತಕ್ಕಂಥ ಪರಿಸ್ಥಿತಿಯಲ್ಲಿ ಅವರನ್ನು ನೇರವಾಗಿ ಕರೆದು ಮಾತನಾಡಿ ಈ ದಿಸೆಯಲ್ಲಿ ಕ್ರಮ ತೆಗೆದುಕೊಳ್ಳತಕ್ಕಂಥ ಒಂದು ಸಹಾನುಭೂತಿಯನ್ನು ಸರ್ಕಾರದವರು ತೋರಿಸಬೇಕೆಂದು ತಮ್ಮ ಮೂಲಕ ಸರ್ಕಾರದ ಗಮನಕ್ಕೆ ತರಬಯಸುತ್ತೇನೆ.

ಶ್ರೀ ಪಿ.ಬಿ. ಪಾಟೀಲ (ಮುಂಡರಗಿ) :- ಮಾನ್ಯ ಅಧ್ಯಕ್ಷರೇ ನಾವು ಸರ್ಕಾರಕ್ಕೆ ಕೊಟ್ಟಂಥ ಗಮನ ಸೆಳೆಯುವ ಸೂಚನೆಯ ಬಗ್ಗೆ ಮಾನ್ಯ ಮಂತ್ರಿಗಳು ಕೊಟ್ಟಂಥ ಒಂದು ಉತ್ತರವನ್ನು ನೋಡಿದರೆ ಅವರು ಬೇರೆ ಹಿಂದಿನ ಇತಿಹಾಸವಲ್ಲೇ ಇದ್ದಾರೆಂದು ತಿಳಿಯುತ್ತದೆ. ಅವರು ಬೀಜಾಪುರ ಗೋಳಗುಮ್ಮಟ ಕೊಟ್ಟಿದ್ದೇವೆ, ಅದನ್ನು ಕೊಟ್ಟಿದ್ದೇವೆ ಇದನ್ನು ಕೊಟ್ಟಿದ್ದೇವೆಂದು ಸೌಜನ್ಯತೆಯಿಂದ ಹೇಳುವುದರಿಂದ ಏನು ಪ್ರಯೋಜನವಾಗುವುದಿಲ್ಲ. ಮಾನ್ಯ ಸಚಿವರು ಸರಿಯಾದ ಉತ್ತರವನ್ನು ಕೊಡಲಿ. ಏತಕ್ಕೆಂದರೆ ಸ್ಟೇಟ್‌ಮೆಂಟ್‌ನಲ್ಲಿ ಕೊಟ್ಟಿರತಕ್ಕಂಥದ್ದನ್ನು ನೋಡಿದರೆ ಗದಗ್ ಬೆಟಗೇರಿಗೆ ದಿನಾಂಕ ೪-೧೦-೧೯೮೦ ರಲ್ಲಿ ೩೧೦ ಕೋಟಿ ರೂಪಾಯಿಗಳಿಗೆ ಅಡ್ಮಿನಿಸ್ಟ್ರೇಟೀವ್ ಅಪ್ರೂವಲ್ ಕೊಟ್ಟಿದೆ ಎಂದೂ ಮತ್ತು ೫-೮-೧೯೮೧ರಲ್ಲಿ ಇದೇ ಒಂದು ಸ್ಕೀಮ್‌ಗೆ ಟೆಕ್ನಿಕಲ್ ಸ್ಯಾಂಕ್ಷನ್‌ಗೆ ಸರ್ಕಾರವು ಒಪ್ಪಿಕೊಂಡಿದೆ ಎಂತಲೂ ತಮ್ಮ ಸ್ಟೇಟ್‌ಮೆಂಟ್‌ನಲ್ಲಿ ಕೊಟ್ಟಿದ್ದಾರೆ. ಆದರೆ ಈ ಒಂದು ತುಂಗಭದ್ರಾ ನದಿಯ ನೀರನ್ನು ಗದಗ್ ಬೆಟಗೇರಿಗೆ ನೀರು ತರುವ ಸಲುವಾಗಿ ಎಷ್ಟು ಹಣವನ್ನು ಖರ್ಚು ಮಾಡಿರುತ್ತದೆ ಎಂಬುದರ ಬಗ್ಗೆ ಮಾನ್ಯ ಮಂತ್ರಿಗಳು ತಮ್ಮ ಸ್ಟೇಟ್‌ಮೆಂಟ್‌ನಲ್ಲಿ ತಿಳಿಸಿಲ್ಲ. ಅದಕ್ಕಾಗಿ ಮಾನ್ಯ ಅಧ್ಯಕ್ಷರೇ ಈವತ್ತು ಗದಗ್ ಜೀಟಿಗೇರಿಗೆ ಕುಡಿಯುವ ನೀರಿನ ಯೋಜನೆಯ ಸಲುವಾಗಿ ಎಷ್ಟರಮಟ್ಟಿನ ಪ್ರಕ್ಷುಬ್ಧ ವಾತಾವರಣ ಉಂಟಾಗಿದೆ ಎಂದರೆ ಈವತ್ತಿನ ದಿವಸ ಅಲ್ಲಿ ಕುಡಿಯಲಿಕ್ಕೂ ನೀರಿಲ್ಲದೆ ಜನರು ಪರಿತಪಿಸುವಂಥ ಪರಿಸ್ಥಿತಿ ಉಂಟಾಗಿರುತ್ತದೆ. ಈಪತ್ತಿನ ದಿವಸ ಅಲ್ಲಿ ೨೦ ಬೋರ್‌ವೆಲ್‌ಗಳು ಇದ್ದರೂ, ಇನ್ನೂ ೨೦ ಬೋರ್‌ವೆಲ್‌ಗಳನ್ನು ತೆಗೆಸಿ ನೀರಿನ ವ್ಯವಸ್ಥೆಯನ್ನು ಮಾಡುತ್ತೇವೆಂದು ಮಾನ್ಯ ಸಚಿವರು ಹೇಳಿದರು ಅದರಂತೆ ಬೋರ್‌ವೆಲ್‌ಗಳನ್ನು ತೆಗೆಸಿದರೆ ಈಗಿರತಕ್ಕಂಥ ಬೋರ್‌ವೆಲ್‌ಗಳ ನೀರು ಅಲ್ಲಿಗೆ ಹೋಗುತ್ತದೆ. ಆದ್ದರಿಂದ ಈ ಹೊಸದಾಗಿ ಬೋರ್‌ವೆಲ್‌ಗಳನ್ನು ತೆಗೆಯತಕ್ಕಂಥ ಪ್ರಯತ್ನವನ್ನು ಕೈಬಿಡಬೇಕು. ತುಂಗಭದ್ರಾ ನೀರಿನ ಯೋಜನೆಯನ್ನು ತೆಗೆದುಕೊಳ್ಳಬೇಕೆಂದರೆ ಕನಿಷ್ಟಪಕ್ಷ ಒಂದು ಕೋಟಿ ರೂಪಾಯಿಗಳಾದರೂ ಒದಗಿಸಿಕೊಡಬೇಕಾಗುತ್ತದೆ. ಈ ಯೋಜನೆಯು ಮುಗಿಯಬೇಕಾದರೆ. ಮೂರು ವರ್ಷಗಳಾದರೂ ಬೇಕಾಗುತ್ತದೆ. ಜಿಯಲಾಜಿಕಲ್ ತಂತ್ರಜ್ಞರು ಹೇಳಿರುವ ಪ್ರಕಾರ ಈ ಬೋರ್‌ವೆಲ್‌ಗಳಲ್ಲಿ ೧೯೮೩ನೇ ಇಸವಿಯ ಹೊತ್ತಿಗೆ ಒಂದು ಹನಿಯೂ ಕೂಡ ಸಿಗುವುದಿಲ್ಲವೆಂದು ತಮ್ಮ

ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಆದ್ದರಿಂದ ಈ ತುಂಗಭದ್ರಾ ಯೋಜನೆಗೆ ಸರ್ಕಾರದ ಒಪ್ಪಿಗೆ ೧೯೮೦ನೇ ಇಸವಿಗೆ ಸಿಕ್ಕಿ ಅವತ್ತಿನಿಂದ ಈವತ್ತಿನ ದಿನಪರೆಗೂ ಎರಡು ಲಕ್ಷ ರೂಪಾಯಿಗಳನ್ನು ಕೊಟ್ಟಿರು ತ್ತಾರೆ. ಈ ಎರಡು ಲಕ್ಷ ರೂಪಾಯಿಗಳು ಕೆ.ಯು.ಡಬ್ಲ್ಯೂ.ಎಸ್. ಪಬ್ಲಿಕ್ ಹಲ್ತ್ ಇಂಜಿನೀಯರಿಂಗ್ ಡಿಪಾರ್ಟ್‌ಮೆಂಟ್‌ಗೆ ಹೋಗಿಬಿಡುತ್ತದೆ.

೩.೩೦ ಪಿ.ಎಂ.

ಈ ಬಗ್ಗೆ ಮಾನ್ಯ ಹಣಕಾಸಿನ ಮಂತ್ರಿಗಳು ಆಸಕ್ತಿ ವಹಿಸಿಲ್ಲ ಎಂದು ಹೇಳಬೇಕಾಗುತ್ತದೆ. ಇದನ್ನು ಬಹಳ ವಿಷಾದದಿಂದ ಹೇಳಬೇಕಾಗಿದೆ. ಈ ವಿಷಯವನ್ನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೂ ತಂದಿದ್ದೇವೆ. ಈ ಊರಿಗೆ ಸಂಬಂಧಪಟ್ಟ ಮಂತ್ರಿಗಳು ಹೇಳಿದರೂ ಸಹಾ ಮಾನ್ಯ ಹಣ ಕಾಸಿನ ಮಂತ್ರಿಗಳು ಈ ಬಗ್ಗೆ ಆಸಕ್ತಿ ವಹಿಸಿಲ್ಲ. ಇಷ್ಟೊಂದು ಅಸಮಾಧಾನವನ್ನು ತೋರಿಸುವುದು ಒಳ್ಳೆಯದಲ್ಲವೆಂದು ಮಾನ್ಯ ಹಣಕಾಸಿನ ಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ. ಇಲ್ಲಿನ ಗದಗ್ ಹಾಗೂ ಬೆಟಗೇರಿಯಲ್ಲಿನ ಸುಮಾರು ೧,೨೫,೦೦೦ ಜನ ಎರಡನೆಯ ತಾರೀಖಿನಿಂದ ಉಪವಾಸ ಸತ್ಯಾಗ್ರಹ ಹೂಡಿದ್ದಾರೆ. ಅಲ್ಲಿಯ ಜನ ನೀವು ಸ್ಥಳಿಯ ಶಾಸಕರು ಅಡಳಿತ ಪಕ್ಷದವರಿದ್ದು ಏನೂ ಮಾಡುತ್ತಿಲ್ಲ ಎಂದು ನಮ್ಮನ್ನು ಕೇಳುತ್ತಿದ್ದಾರೆ. ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳನ್ನು ಹಾಗೂ ಸಂಬಂಧ ಪಟ್ಟ ಮಂತ್ರಿಯವರನ್ನು ಮತ್ತು ಮಾನ್ಯ ಹಣಕಾಸಿನ ಮಂತ್ರಿಯವರನ್ನು ಕೇಳುವುದು ಏನೆಂದರೆ ಈ ಒಂದು ಯೋಜನೆಯ ಸಲುವಾಗಿ ತಾವು ಒಂದು ಕೋಟಿ ರೂಪಾಯಿಯನ್ನು ಮಂಜೂರು ಮಾಡುವ ಆಶ್ವಾಸನೆಯನ್ನು ಕೊಟ್ಟರೆ ಅಲ್ಲಿ ಸರದಿಯಲ್ಲಿ ಉಪವಾಸ ಸತ್ಯಾಗ್ರಹವನ್ನು ಮಾಡುತ್ತಿರುವ ಜನರಿಗೆ ಈ ವಿಷಯ ತಿಳಿಸಿ ಅದನ್ನು ಅಂತ್ಯಗೊಳಿಸಬಹುದು. ಇಲ್ಲದಿದ್ದರೆ ಅಲ್ಲಿ ಉಂಟಾಗುವ ಪ್ರಕ್ಷುಬ್ಧ ವಾತಾ ವರಣಕ್ಕೆ ನಾವು ಹೊಣೆಗಾರರಾಗಬೇಕಾಗುತ್ತದೆ. ಇದನ್ನು ತಪ್ಪಿಸುವ ಸಲುವಾಗಿ ತಕ್ಷಣ ಒಂದು ಕೋಟಿ ರೂಪಾಯಿಗಳನ್ನು ಮಂಜೂರು ಮಾಡುತ್ತೇವೆನ್ನುವ ಹೇಳಿಕೆಯನ್ನು ಕೊಟ್ಟರೆ ನಿಜವಾದ ಕಲ್ಯಾಣ ಕೆಲಸವಾಗುತ್ತದೆಂದು ಈ ಮೂಲಕ ತಿಳಿಸುತ್ತೇನೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಮಾನ್ಯ ಸದಸ್ಯರು ಮಾತನಾಡುವಾಗ ಮಾನ್ಯ ಆರ್ಥಿಕ ಮಂತ್ರಿ ಗಳಿಗೆ ಈ ಬಗ್ಗೆ ಸಹಾನುಭೂತಿ ಇಲ್ಲ ಎಂದು ಹೇಳಿದರು. ಅದು ಸರಿಯಲ್ಲ. ಈ ಸದನದಲ್ಲಿ ಒಂದು ವರ್ಷದಲ್ಲಿ ಏನೇನು ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬಹುದೆಂದು ಹೇಳಿ ಹಣವನ್ನು ಒದಗಿಸಲಾಗು ತ್ತದೆಯೋ ಅಂತಹ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಈ ಒಂದು ವಿಷಯದ ಬಗ್ಗೆ ನಮ್ಮ ಸಂಪೂರ್ಣವಾದ ಸಹಾನುಭೂತಿ ಇದ್ದೇ ಇದೆ.

ಶ್ರೀ ವಿ.ಬಿ. ಭಾವಿ.—ಗದಗ ಮತ್ತು ಬೆಟಗೇರಿಗೆ ನೀರು ಒದಗಿಸುವ ಬಗ್ಗೆ ಇವರು ನಿರ್ಲಕ್ಷಿಸಿ ದ್ದಾರೆನ್ನುವ ಮಾತನ್ನು ಜನರು ಹೇಳುತ್ತಿದ್ದಾರೆನ್ನುವ ವಿಷಯವನ್ನು ನಾನು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಕೆ.ಎಚ್. ಶ್ರೀನಿವಾಸ್.—ಮಾನ್ಯ ಅರ್ಥ ಮಂತ್ರಿಗಳು ಹೇಳಿದ ಮಾತುಗಳಿಂದಲೇ ತಿಳಿಯು ಬಹುದು ಅವರಿಗೆ ಈ ಬಗ್ಗೆ ಎಷ್ಟು ಆಸಕ್ತಿ ಇದೆ ಎಂಬುದನ್ನು. He has clearly, beyond doubt established the fact that he is not interested in the project.

† ಶ್ರೀ ಧರ್ಮಸಿಂಗ್ (ಮಾನ್ಯ ನಗರಾಭಿವೃದ್ಧಿ ಹಾಗೂ ವಸತಿ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಇಲ್ಲಿಯವರೆಗೆ ಈ ಗಮನ ಸೆಳೆಯುವ ಸೂಚನೆ ಬಗ್ಗೆ ಮಾನ್ಯ ಸದಸ್ಯರಾದ ಶ್ರೀ ಮುತ್ತಿನಪೆಂಡಿಮಠ್, ಶ್ರೀ ವೀರಪ್ಪ ಪುತ್ತಿಕಟ್ಟಿ ಹಾಗೂ ಶ್ರೀ ವಿ. ಬಿ. ಭಾವಿ ಅವರು ಸಾಕಷ್ಟು ವಿವರವಾಗಿ ಗದಗ್ ಹಾಗೂ ಬೆಟಗೇರಿ ನೀರು ಸರಬರಾಜು ವಿಷಯದ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಮತ್ತು ಈ ದಿನ ಗದಗ ಮತ್ತು ಬೆಟಗೇರಿಯಲ್ಲಿ ಉಪವಾಸ ಸತ್ಯಾಗ್ರಹ ನಡೆಯುತ್ತಿದೆ. ಇದೂ ಕೂಡ ಸರ್ಕಾರದ ಗಮನಕ್ಕೆ ಬಂದಿದೆ. ಈ ವಿಷಯವನ್ನು ಮಾನ್ಯ ಸದಸ್ಯರೂ ಕೂಡ ಟೆಲಿಗ್ರಾಮ್ ಮೂಲಕ ಮಾನ್ಯ ಮುಖ್ಯಮಂತ್ರಿಗಳಿಗೆ ತಿಳಿಸಿದ್ದರು. ಒಂದನೇ ತಾರೀಖಿನಿಂದ ಅಲ್ಲಿ ಉಪವಾಸ ಸತ್ಯಾಗ್ರಹ ಕೂಡುತ್ತಾರೆ ಈ ವರ್ಷ ಇಲ್ಲಿ ನೀರಿಗೆ ಬಹಳ ತೊಂದರೆ ಇದೆ ಎಂದು ತಿಳಿಸಿದ್ದರು. ಈ ಬಗ್ಗೆ ಸರ್ಕಾರ ತ್ವರಿತವಾಗಿ ವಿಚಾರ ಮಾಡಬೇಕೆನ್ನುವುದರ ಬಗ್ಗೆ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ನಾನೂ ಕೂಡ ಸಾಕಷ್ಟು ಸಲ ಮಂತ್ರಿ ಆದಮೇಲೆ ಕರ್ನಾಟಕ ರಾಜ್ಯದಲ್ಲಿರತಕ್ಕ ಯೋಜನೆಗಳ ಬಗ್ಗೆ ತಿಳಿಯಲು

ಅವುಗಳು ಪೂರ್ಣ ಆಗಿವೆಯೇ ಯಾವ ಹಂತದಲ್ಲಿ ಇವೆ ಎಂಬುದನ್ನು ತಿಳಿಯಲು ಹೋಗಿ ನೋಡಿ ಬಂದಿದ್ದೇನೆ. ಎಲ್ಲವುಗಳ ಬಗ್ಗೆ ವಿಮರ್ಶೆ ಮಾಡಿ ನಾನು ಮಾತನಾಡುತ್ತೇನೆ. ಆ ಪ್ರಕಾರ ನೋಡಲು ನಾನು ಗದುಗಿಗೆ ಸಾಕಷ್ಟು ಪ್ರಾಶಸ್ತ್ಯ ಕೊಟ್ಟಿದ್ದೇನೆ. ೧೯೬೬ರಿಂದ ಇಲ್ಲಿಯವರೆಗೆ ಈ ಗದಗ್ ಹಾಗೂ ಬೆಟಗೇರಿ ನೀರಾವರಿ ಸರಬರಾಜು ಕಾಂಟ್ರವರ್ಸಿ ಸಬ್ಜೆಕ್ಟ್ ಆಗಿದೆ. ಇಲ್ಲಿ ಒಂದು ಲಕ್ಷದ ೨೦ ಸಾವಿರ ಜನ ಸಂಖ್ಯೆ ಇದೆ. ಇಲ್ಲಿನ ನೀರು ಸರಬರಾಜು ಯೋಜನೆಗೆ ೧೯೬೬ರಲ್ಲಿ ೧೧೫ ಲಕ್ಷ ರೂಪಾಯಿಯ ಯೋಜನೆ ಹಾಕಿ ೧೯೬೯ರಲ್ಲಿ ೧೩೨ ಲಕ್ಷ ರೂಪಾಯಿಗಳ ಯೋಜನೆ ಹಾಕಿ ಹೀಗೆ ಇದು ಮುಂದೆ ಬರುತ್ತಾ ಬರುತ್ತಾ ಇವತ್ತು ೭೫೦ ಲಕ್ಷ ರೂಪಾಯಿಗಳ ಒಂದು ಯೋಜನೆಯಾಗಿದೆ ಇದು ಮೂಲಪ್ರಭಾವದಿಂದ ನೀರು ಸರಬರಾಜು ಮಾಡುವ ಯೋಜನೆಯಾಗಿದ್ದು ಇದು ವ್ಯಾಪಾರಸ್ಥ ಸ್ಥಳ ಆಗಿದ್ದರಿಂದ ಜನಸಂಖ್ಯೆಗೆ ಅನುಗುಣವಾಗಿ ಅಲ್ಲಿಂದ ನೀರು ಸರಬರಾಜು ಮಾಡಲು ಆಗುವುದಿಲ್ಲ ಎಂದು ತಿಳಿದು ಅದನ್ನು ಡ್ರಾಪ್ ಮಾಡಲಾಯಿತು. ಮುಂದೆ ತುಂಗಭದ್ರಾದಿಂದ ನೀರನ್ನು ಪಡೆಯಲು ಯೋಜನೆ ಹಾಕಿ ಟೆಕ್ನಿಕಲ್ ರಿಪೋರ್ಟ್ ಬಂದಿದ್ದು ಇದು ೭೫೦ ಲಕ್ಷ ರೂಪಾಯಿಗಳ ಯೋಜನೆಯಾಯಿತು. ಈ ಒಂದು ಯೋಜನೆಯಲ್ಲಿ ಪ್ರತಿ ಒಂದು ಸಾವಿರ ಗ್ಯಾಲನ್ ನೀರಿಗೆ ೧೫ ರೂಪಾಯಿ ಖರ್ಚು ಬಹಳ ಆಗುತ್ತದೆ ಎಂದು ಎಲ್.ಐ.ಸಿ.ಯವರು ಇದಕ್ಕೆ ಒಪ್ಪುತ್ತಾ ಇಲ್ಲ. ಇಷ್ಟು ಹೆಚ್ಚಿನ ದರಹೊರೆ ಮೇಲೆ ಬೀಳುತ್ತದೆ. ಮುನಿಸಿಪಾಲಿಟಿಗೆ ಭಾರವಾಗುತ್ತದೆ. ಆದ್ದರಿಂದ ಇದನ್ನು ಸರ್ಕಾರವೇ ವಹಿಸಿಕೊಳ್ಳಬೇಕಾದ ವಿಚಾರ ಬಂದಾಗ ಈ ಒಂದು ಸ್ಕೀಮ್ ಸ್ಥಗಿತವಾಗಿ ನಿಂತಿದೆ. ಈ ರೀತಿ ೧೯೬೬ರಲ್ಲಿ ಪ್ರಾರಂಭ ಆದುದು ೮೧ರ ವರೆಗೆ ಇದು ಹಾಗೆ ಬಂತು. ಇದಕ್ಕೆ ನಾವು ಕಾರಣರಲ್ಲ. ಆದರೂ ಕೂಡ ನಾವು ಈ ಯೋಜನೆ ಬಗ್ಗೆ ಹೆಚ್ಚಿನ ಗಮನ ಕೊಡುತ್ತೇವೆ. ಮೊನ್ನೆತಾನೆ ಮಾನ್ಯ ಮುಖ್ಯಮಂತ್ರಿಗಳು ಕೂಡ ಅಲ್ಲಿಯ ಶಾಸಕರನ್ನು ಭೇಟಿ ಆದಾಗ ಈ ಬಗ್ಗೆ ಹೇಳಿದ್ದಾರೆ. ಈ ವಿಷಯದ ಬಗ್ಗೆ ವಿಷಯ ಪ್ರಸ್ತಾಪ ಆದಾಗ ಮಾನ್ಯ ಆರ್ಥಿಕ ಮಂತ್ರಿಗಳೂ ಕೂಡ ಮಾತುಕತೆ ನಡೆಸಿದ್ದಾರೆ. ಎಲ್.ಐ.ಸಿ.ಯವರ ಮನವೊಲಿಸಿ ಹೆಚ್ಚಿನ ಮಹತ್ವ ಕೊಟ್ಟು ಪ್ರಯತ್ನ ಮಾಡಬೇಕೆಂದು ನಿರ್ಣಯವನ್ನು ತೆಗೆದುಕೊಂಡಿದ್ದೇವೆ. ಈಗಾಗಲೇ ಇಲ್ಲಿ ೭೮ ಲಕ್ಷ ರೂಪಾಯಿ ಖರ್ಚು ಮಾಡಿದ್ದೇವೆ. ಇದುವರೆವಿಗೂ ಇಲ್ಲಿ ಎಕ್ಸ್‌ಟೆಂಡಿಂಗ್ ವಾಟರ್ ಸಪ್ಲೈ ಸ್ಕೀಂ ಇಲ್ಲ. ಕೇವಲ ಬೋರ್‌ವೆಲ್‌ಗಳಿಂದ ನೀರನ್ನು ಒದಗಿಸಲಾಗುತ್ತಿದೆ. ಕೇವಲ ೫ ಲಕ್ಷ ಗ್ಯಾಲನ್ ನೀರು ಬರುತ್ತಿದ್ದು ಇಲ್ಲಿ ೧,೨೦,೦೦೦ ಜನಸಂಖ್ಯೆ ಇದೆ. ನೀರು ಕೊರತೆ ಇದ್ದರೂ ನಾವು ಸ್ಕೀಮ್ ಮಾಡಿ ಕೊಡುವುದಕ್ಕಾಗುವುದಿಲ್ಲ. ಯೋಜನೆಗಳನ್ನು ಮಾಡಬೇಕಾಗುತ್ತದೆ. ಇದಕ್ಕೆ ಸಾಕಷ್ಟು ಎಡರು ತೊಡರುಗಳು ಬರುತ್ತವೆ. ಯಾವ ರೀತಿ ಮಾಡಬೇಕು ಎನ್ನುವುದಕ್ಕೆ ಸಾಕಷ್ಟು ಅವಕಾಶ ಬೇಕಾಗುತ್ತದೆ. ಈ ಬಗ್ಗೆ ಆರ್ಥ ಮಂತ್ರಿಗಳು ೧೦ ಲಕ್ಷ ರೂ. ಕೊಟ್ಟಿದ್ದಾರೆ, ೨೦ ಲಕ್ಷ ರೂ. ಕೊಡಬೇಕೆಂದು ಮಾಡಿದ್ದಾರೆ. ಈಗ ಅಲ್ಲಿ ೫ ಲಕ್ಷ ಗ್ಯಾಲನ್ ನೀರು ಮಾತ್ರ ದೊರೆಯುತ್ತಿದೆ. ಇಲ್ಲಿ ಟ್ಯಾಂಕರ್ಸ್ ವ್ಯವಸ್ಥೆಯನ್ನೂ ಸಹಾ ಮಾಡುತ್ತೇವೆ. ಯಾವ ಒಂದು ೭ ಕೋಟಿ ೫೦ ಲಕ್ಷದ ಯೋಜನೆ ಇದೆ ಇದಕ್ಕೆ ಇವತ್ತು ಮಾನ್ಯ ಮುಖ್ಯಮಂತ್ರಿಗಳು ಆಜ್ಞೆ ಮಾಡಿದ್ದಾರೆ. ಆರ್ಥ ಮಂತ್ರಿಗಳಂ ಇದನ್ನು ಮಾಡಬೇಕೆಂದು ಹೇಳಿದ್ದಾರೆ. ಎಲ್.ಐ.ಸಿ.ಯವರ ಜೊತೆಗೆ ಮಾತನಾಡಿ ಇವತ್ತು ೨ ಕೋಟಿ ೬೭ ಲಕ್ಷ ರೂ. ವನ್ನು ಎಲ್.ಐ.ಸಿ.ಯವರು ಕೊಡತಕ್ಕದ್ದು ಇನ್ನು ಮಿಕ್ಕಿದ್ದನ್ನು ಮುನಿಸಿಪಾಲಿಟಿಯವರು ಬೇರ್ ಮಾಡತಕ್ಕದ್ದು ಇದೆ ಇದನ್ನು ಸರ್ಕಾರದವರೇ ವಹಿಸಿಕೊಳ್ಳಬೇಕೆಂಬುದನ್ನು ಯೋಚನೆ ಮಾಡಿ, ಪರಿಶೀಲನೆ ಮಾಡಿ ಅದನ್ನು ಜಾಗ್ರತೆ ಮಾಡುತ್ತೇವೆನ್ನುವ ಆಶ್ವಾಸನೆಯನ್ನು ಕೊಡುತ್ತಿದ್ದೇವೆ. ಆ ಜಾಗದಿಂದ ಬಂದಿರತಕ್ಕ ಶಾಸಕರೂ ಕೂಡ ಇಲ್ಲಿ ಪ್ರಸ್ತಾಪ ಮಾಡಿದ್ದಾರೆ. ತಮಗೂ ಈ ಬಗ್ಗೆ ಜವಾಬ್ದಾರಿ ಇದೆ. ತಾವು ಇಲ್ಲಿ ಪ್ರಸ್ತಾಪಿಸಿದ ವಿಷಯವನ್ನು ಅಲ್ಲಿ ಉಪವಾಸ ಕುಳಿತಿರುವವರಿಗೆ ಹೇಳಿ ಅವರು ಆ ಒಂದು ಸತ್ಯಾಗ್ರಹವನ್ನು ಕೈಬಿಡಬೇಕೆಂದು ಹೇಳಬೇಕು. ಕರ್ನಾಟಕದ ನಾನಾ ಭಾಗಗಳಲ್ಲಿ ಮಳೆ ಸರಿಯಾಗಿ ಆಗದೇ ನೀರಿನ ತೊಂದರೆ ಇದೆ. ಆದ್ದರಿಂದ ಇದಕ್ಕೆ ಎಲ್ಲರೂ ಕೂಡ ಸಹಕರಿಸಬೇಕೆಂದು ಈ ಮೂಲಕ ಕೇಳಿಕೊಳ್ಳುತ್ತೇನೆ

ಶ್ರೀ ಮುತ್ತಿನಪೆಂಡಿ ಮಠ್.—ಎಲ್.ಐ.ಸಿ.ಯವರು ೨೭೮ ಲಕ್ಷ ರೂ. ಕೊಡುತ್ತಾರೆ. ಇನ್ನು ಮಿಕ್ಕ ಹಣವನ್ನು ಒದಗಿಸುವ ಬಗ್ಗೆ ಸರ್ಕಾರ ವಹಿಸಿಕೊಂಡು ಅದನ್ನು ತಕ್ಷಣ ಒದಗಿಸುವ ವಿಪ್ರಾಡು ಮಾಡುತ್ತದೆಯೇ ಎಂಬುದನ್ನು ಸ್ಪಷ್ಟವಾಗಿ ಮಾನ್ಯ ಮಂತ್ರಿಗಳು ಹೇಳಬೇಕು.

ಶ್ರೀ ಧರ್ಮಸಿಂಗ್.—ಇದು ಒಟ್ಟು ೭೫೦ ಲಕ್ಷ ರೂಪಾಯಿಯ ಸ್ಕೀಂ ಇದೆ, ಎಲ್.ಐ.ಸಿ ಯವರು ಇಷ್ಟು ಹಣ ಕೊಡಬೇಕು ಹಾಗೂ ಸರ್ಕಾರ ಇದಕ್ಕೆ ಎಷ್ಟು ಹಣವನ್ನು ಕೊಡಬೇಕಾಗಬಹುದು

ಎಂಬುದನ್ನೆಲ್ಲಾ ವಿಚಾರ ಮಾಡಿ ಈ ಸ್ಕೀಮನ್ನು ಪ್ರಾರಂಭ ಮಾಡಿದ್ದೇವೆ. ಈ ಬಗ್ಗೆ ಸರ್ಕಾರದ ಪತಿಯಿಂದ ಎಷ್ಟು ಹಣವನ್ನು ಕೊಡುವುದರ ಬಗ್ಗೆ ಈಗಾಗಲೇ ಹೇಳುವುದಕ್ಕಾಗುವುದಿಲ್ಲ. ಈ ಸ್ಕೀಮನ್ನು ಸರ್ಕಾರ ಪ್ರಾರಂಭ ಮಾಡುತ್ತದೆಂಬ ಆಶ್ವಾಸನೆಯನ್ನು ನಾನು ಸದನಕ್ಕೆ ಕೊಡುತ್ತೇನೆ.

ಶ್ರೀ ವಿ. ಬಿ. ಭಾವಿ.—ಈಗ ಮಾನ್ಯ ಮಂತ್ರಿಗಳು ಹೇಳಿದ್ದು ಬಹಳ ಸಂತೋಷವಾಗಿದೆ. ನನ್ನ ಪ್ರಶ್ನೆ ಇಷ್ಟೆ. ೧೯೮೦-೮೧ರ ಸಾಲಿಗೆ ಕೇವಲ ೧೦ ಲಕ್ಷ ರೂಪಾಯಿ ಇದಕ್ಕೆ ಮಂಜೂರು ಮಾಡಿದರೆ ಯಾವರೀತಿ ಕೆಲಸವಾಗಬಹುದು ನೋಡಿ ಈ ಒಂದು ಯೋಜನೆಗೆ ೧೯೮೦-೮೧ನೇ ಸಾಲಿಗೆ ಕನಿಷ್ಠ ಪಕ್ಷ ಒಂದು ಕೋಟಿ ರೂಪಾಯಿ ಮಂಜೂರು ಮಾಡಿ ಆದರಲ್ಲಿ ೫೦ ಲಕ್ಷ ರೂಪಾಯಿಗಳನ್ನಾದರೂ ಕೂಡ ತಕ್ಷಣ ಬಿಡುಗಡೆ ಮಾಡಿಕೊಟ್ಟರೆ ಒಳ್ಳೆಯದು ಎಂದು ಹೇಳುತ್ತೇನೆ. ಅನುಕೂಲವಾಗುತ್ತದೆ. ಈಗ ಮಾನ್ಯ ಮುಖ್ಯಮಂತ್ರಿಗಳು ಈ ಸದನದಲ್ಲಿರುವುದರಿದ ಇದರ ಬಗ್ಗೆ ಒಂದು ಆಶ್ವಾಸನೆಯನ್ನು ಕೊಡಬೇಕೆಂದು ನಾನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ಶ್ರೀ ವಿ. ಎ. ಮತ್ತಿಕಟ್ಟಿ.—ಅಲ್ಲಿ ಈ ಸಮಸ್ಯೆ ಬಹಳ ಜಟಿಲವಾಗಿದೆ. ಮಾನ್ಯ ಮುಖ್ಯಮಂತ್ರಿಗಳು ಗದಗ್‌ಗೆ ಭೇಟಿ ಇತ್ತಾಗ ಅವರು ಈ ಬಗ್ಗೆ ಪೂರ್ಣ ಆಶ್ವಾಸನೆಯನ್ನು ಕೊಟ್ಟಿದ್ದಾರೆ. ಆದರಂತೆ ಅವರು ಈ ಕೆಲಸವನ್ನು ನೆರವೇರಿಸಿಕೊಡುತ್ತಾರೆಂಬ ನಂಬಿಕೆ ನನಗೆ ಇದೆ. ಇದಕ್ಕೆ ಎಲ್.ಐ.ಸಿ.ಯವರೂ ಆಷ್ಟು ಕೊಡುತ್ತಾರೆ, ಸರ್ಕಾರವೂ ಆಷ್ಟು ಕೊಡುತ್ತದೆ ಅನ್ನುವ ಪ್ರಶ್ನೆ ಮುಖ್ಯವಲ್ಲ. ಒಟ್ಟಿನಲ್ಲಿ ಸರ್ಕಾರ ಗದಗ್-ಬೆಟಗೇರಿ ನಾಗರೀಕರಿಗೆ ನೀರಿನ ಸೌಲಭ್ಯವನ್ನು ಒದಗಿಸುವುದು ಮುಖ್ಯ ಕರ್ತವ್ಯ. ಆದುದರಿಂದ ಇದಕ್ಕೆ ಒಂದು ಟೈಂಬೌಂಡ್ ಪ್ರೋಗಾಂ ಹಾಕಿ ಇಷ್ಟೆ ದಿವಸದಲ್ಲಿ ಅಂದರೆ ೧೯೮೩ರ ಒಳಗಾದರೂ ಕೂಡ ಮಾಡಿಕೊಡಬೇಕು ಎಂದು ಹೇಳುತ್ತೇನೆ. ಮಾನ್ಯ ಮಂತ್ರಿಗಳಿಗೆ ಗೊತ್ತಿರುವ ಹಾಗೆ ಅಲ್ಲಿ ಬೋರ್‌ವೆಲ್ ಹಾಕಿದರೂ ಸಹ ನೀರು ಬರುವುದಿಲ್ಲ. ಎಲ್ಲಾ ಬಾವಿಗಳಲ್ಲೂ ನೀರು ಬತ್ತಿ ಹೋಗಿದೆ. ಆದುದರಿಂದ ದಯವಿಟ್ಟು ತರಾತುರಿಯಾಗಿ ೧೯೮೩ರ ಒಳಗಾದರೂ ಸರಿ ಈ ಕೆಲಸವನ್ನು ಮುಗಿಸುವಂತೆ ಮಾಡಿಕೊಡಬೇಕು. ಇದನ್ನು ತಾವು ತೀವ್ರಗತಿಯಲ್ಲಿ ಯೋಚನೆ ಮಾಡಿ ತಕ್ಕ ಕಾರ್ಯಕ್ರಮ ಕೈಗೊಳ್ಳಬೇಕು ಎಂದು ಹೇಳುತ್ತೇನೆ. ಇದನ್ನು ಡಿಲೇ ಮಾಡಿದರೆ ಇನ್ನೂ ಹಣ ಹೆಚ್ಚಾಗಿ ಖರ್ಚಾಗುತ್ತದೆ. ಆದುದರಿಂದ ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳಲ್ಲಿ ಹಾಗೂ ನಗರಾಭಿವೃದ್ಧಿ ಮಂತ್ರಿಗಳಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ೧೯೮೩ರ ಒಳಗಾಗಿ ಈ ಯೋಜನೆಯನ್ನು ಮುಗಿಸಿಕೊಡಬೇಕೆಂದು. ಅದಕ್ಕಾಗಿ ಈ ವರ್ಷ ಅರ್ಧ ಹಣ ಕೊಟ್ಟು ಮುಂದಿನ ವರ್ಷ ಅರ್ಧ ಹಣವನ್ನಾದರೂ ಕೊಟ್ಟು ಆ ಕೆಲಸ ಪೂರ್ಣವಾಗುತ್ತದೆ ಎನ್ನುವುದನ್ನು ಸರ್ಕಾರದ ಗಮನಕ್ಕೆ ತರಲಿಚ್ಛಿಸುತ್ತೇನೆ.

ಶ್ರೀ ಧರ್ಮಸಿಂಗ್.—ನಾನು ಈಗಾಗಲೇ ವಿವರಗಳನ್ನು ಹೇಳಿದ್ದೇನೆ. ಈಗ ಪ್ರಸ್ತುತ ಸನ್ನಿವೇಶದಲ್ಲಿ ಗದಗ್-ಬೆಟಗೇರಿಯಲ್ಲಿ ನೀರಿನ ತೊಂದರೆ ಏನು ಇದೆ ಅದನ್ನು ನಿವಾರಿಸಲು ಸದ್ಯಕ್ಕೆ ಎಷ್ಟು ಹಣ ಕೊಡಬೇಕೋ ಅಷ್ಟನ್ನೂ ಕೊಟ್ಟು ಸುಧಾರಿಸುತ್ತೇವೆ. ನಾವು ಈಪೊತ್ತು ಸರ್ಕಾರದ ಪತಿಯಿಂದ ೫೦ ಲಕ್ಷ ರೂಪಾಯಿ ಖರ್ಚು ಮಾಡುವುದಾದರೆ ಎಲ್.ಐ.ಸಿ.ಯವರೂ ಕೂಡ ೫೦ ಲಕ್ಷ ರೂಪಾಯಿ ಕೊಡುತ್ತಾರೆಂದು ಖಚಿತವಾಗಿ ಹೇಳುವುದಕ್ಕಾಗುವುದಿಲ್ಲ. ಏತಕ್ಕೆ ಇದು ಬಹಳ ಜವಾಬ್ದಾರಿಯುತ ವಾದಂಥಾ ಪ್ರಶ್ನೆ ಹಾಗೂ ತೀವ್ರವಾಗಿ ಆಲೋಚನೆ ಮಾಡಬೇಕಾದ ವಿಷಯ ಅವರು ಈ ಯೋಜನೆಗೆ ಮನ್ನಣೆ ಕೊಡುತ್ತಾರೋ ಇಲ್ಲವೋ ಗೊತ್ತಿಲ್ಲ. ಬಹಳ ಕಷ್ಟ ಇದೆ. ಆದುದರಿಂದ ಈಗ ಸದ್ಯಕ್ಕೆ ಅಲ್ಲಿ ಇರುವ ಪರಿಸ್ಥಿತಿಯನ್ನು ಸುಧಾರಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ವಿ. ಬಿ. ಭಾವಿ.—ಸ್ವಾಮಿ, ಈ ಯೋಜನೆಯನ್ನು ಯಾವಾಗ ಪ್ರಾರಂಭ ಮಾಡುತ್ತೀರಿ, ಯಾವಾಗ ಮುಗಿಸುತ್ತೀರಿ ?

ಶ್ರೀ ಧರ್ಮಸಿಂಗ್.—ಅಲ್ಲಿ ನೀರಿನ ತೊಂದರೆ ಇದೆ ಎನ್ನುವುದನ್ನು ತಿಳಿದುಕೊಂಡೇ ಈಗಾಗಲೇ ಅಲ್ಲಿಗೆ ಇಂಜಿನಿಯರ್ ಅವರನ್ನು ಕಳುಹಿಸಿಕೊಟ್ಟಿದ್ದೇವೆ. ಸ್ವಲ್ಪ ಹಣವನ್ನೂ ಕೂಡ ಬಿಡುಗಡೆ ಮಾಡಿದ್ದೇವೆ. ಸದ್ಯದ ಪರಿಸ್ಥಿತಿಯನ್ನೂ ಸಹ ಸುಧಾರಿಸಿದ್ದೇವೆ. ಈ ಯೋಜನೆಯನ್ನು ಆದಷ್ಟು ಜಾಗ್ರತೆ ಇನ್ನು ಕೆಲವೇ ದಿವಸಗಳಲ್ಲಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆಂದು ಹೇಳುತ್ತೇನೆ.